# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ವಿಧಾನ ಪರಿಷತ್ತ ಸದಸ್ಯರ ಹೆಸರು: | ಶ್ರೀ ಬಿ.ಜಿ.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 1070 (969) |
| ಉತ್ತರಿಸಬೇಕಾದ ದಿನಾಂಕ: | 15-03-2021. |
| ಉತ್ತರಿಸುವ ಸಚಿವರು: | ವೈದ್ಯಕೀಯ ಶಿಕ್ಷಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಯಾದಗಿರಿ ಜಿಲ್ಲೆಯಲ್ಲಿ ಸರ್ಕಾರವು ಸರ್ಕಾರಿ ಮೆಡಿಕಲ್ ಕಾಲೇಜು ನಿರ್ಮಾಣದ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆಯೇ; ಆಗಿದ್ದಲ್ಲಿ, ವಸ್ತು.ಸ್ಥಿತಿಯ ಮಾಹಿತಿ ನೀಡುವುದು; | ಯಾದಗಿರಿ ಜಿಲ್ಲೆಯಲ್ಲಿ ಸರ್ಕಾರವು ಯಾದಗಿರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಸರ್ಕಾರಿ ಮೆಡಿಕಲ್ ಕಾಲೇಜಿನ ನಿರ್ಮಾಣದ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ. ಪ್ರಸ್ತುತ ಶೈಕ್ಷಣಿಕ ಬ್ಲಾಕ್, ಮಹಿಳಾ ಮತ್ತು ಪುರುಷರ, ಸಿಬ್ಬಂದಿ ಹಾಗೂ ಡಿ-ಗ್ರೂಪ್ ನೌಕರರ ವಸತಿ ಗೃಹಗಳ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. |
| ಆ) | ಸದರಿ ಮೆಡಿಕಲ್ ಕಾಲೇಜನ್ನು ಪ್ರಾರಂಭಿಸಲು ಎಷ್ಟು ಎಕರೆ ಭೂಮಿಯನ್ನು ನಿಗಧಿಪಡಿಸಿದೆ; (ವಿವರ ನೀಡುವುದು) | ಸದರಿ ಕಾಲೇಜನ್ನು ಪ್ರಾರಂಭಿಸಲು ಯಾದಗಿರಿ ಜಿಲ್ಲೆ ಮತ್ತು ತಾಲೂಕಿನ ಮುದ್ನಾಳ ಹೋಬಳಿ ಗ್ರಾಮದ ಸೀಮಾಂತರದ ಸರ್ವೆ ನಂ.28/1ರಲ್ಲಿ 13 ಎಕರೆ 18 ಗುಂಟೆ ಮತ್ತು ಸರ್ವೆ ನಂ.24ರಲ್ಲಿ 17 ಎಕರೆ 20 ಗುಂಟೆ ಒಟ್ಟು 30 ಎಕರೆ ಮತ್ತು 38 ಗುಂಟೆ ಭೂಮಿಯನ್ನು ನಿಗಧಿಪಡಿಸಿದೆ. |
| ಇ) | ಸರ್ಕಾರಿ ಮೆಡಿಕಲ್ ಕಾಲೇಜು ಸಾರ್ವಜನಿಕ ಸೇವೆಗೆ ಎಂದಿನಿಂದ ಲಭ್ಯವಾಗಲಿದೆ? (ವಿವರ ನೀಡುವುದು) | ಸರ್ಕಾರಿ ಮೆಡಿಕಲ್ ಕಾಲೇಜು 2021-22ನೇ ಸಾಲಿನಲ್ಲಿ ಸಾರ್ವಜನಿಕ ಸೇವೆಗೆ ಲಭ್ಯವಾಗಲಿದೆ. |

ಸಂಖ್ಯೆ: ಎಂಇಡಿ 185 ಎಂಪಿಎಸ್ 2021

(ಡಾ.ಕೆ.ಸುಧಾಕರ್)
ವೈದ್ಯಕೀಯ ಶಿಕ್ಷಣ ಹಾಗೂ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಇಲಾಖಾ ಸಚಿವರು